ಮಾಡಿದ್ದು. ಏಕೆಂದರೆ ತಜ್ಞರು ಹೇಳಿದ ಪ್ರಕಾರ ವ್ಯಾಪಕವಾಗಿ ಒಂದೇ ಸಾರಿಗೆ ಮಾಡಿದರೇನೇ ಅದನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಇಲ್ಲದೆ ಕೆಲವು ಕಡೆ ಮಾಡುವುದು, ಕೆಲವು ಕಡೆ ಮಾಡದಿರುವುದು, ಕೆಲವು ಮರಗಳಿಗೆ ಔಷಧಿ ಹಾಕುವುದು, ಕೆಲವು ಮರಗಳಿಗೆ ಹಾಕದಿರುವುದು ಮಾಡಿದರೆ ಆಗುವುದಿಲ್ಲ. ಒಂದು ಮರವನ್ನೂ ಬಿಡದೆ ರೀತಿಯಲ್ಲಿ ಏಕಕಾಲದಲ್ಲಿ ಎಲ್ಲಾ ಕಡೆ ಮಾಡಿದರೆ ಮಾತ್ರ ಪ್ರಯೋಜನವಾಗುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಚುನಾವಣೆ ಬಂದ ಕಾರಣಕ್ಕಾಗಿ ಈ ಕಾರ್ಯಕ್ರಮದಲ್ಲಿ ಸ್ವಲ್ಪ ಏರುಪೇರಾಗಿದೆ. ಸದಸ್ಯರು ಹೇಳಿರುವುದರಲ್ಲೂ ಸತ್ಯಾಂಶ ಇದೆ. ಕಾರ್ಯಕ್ರಮದ ಅನುಷ್ಠಾನದಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದು ಕಂಡುಬರುತ್ತದೆ. ಅದಕ್ಕೆ ತೋಟಗಾರಿಕೆ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಹೈಪವರ್ ಸಮಿತಿ ಕೂಡ ಇದೆ. ನಾನು ಹಿಂದೆ ತೋಟಗಾರಿಕಾ ಸಚಿವನಾಗಿದ್ದಾಗ ಅದರ ಅಧ್ಯಕ್ಷನಾಗಿದ್ದೆ. ತರುವಾಯ ನಾನು ತೋಟಗಾರಿಕೆ ಇಲಾಖೆ ಬಿಟ್ಟ ಮೇಲೆ ಬಂದ ಸಚಿವರು ಅದರ ಅಧ್ಯಕ್ಷತೆ ಮುಂದುವರೆಸಬೇಕಾಗಿತ್ತು. ಸಾಧ್ಯವಾದಷ್ಟು ಬೇಗ ಆ ಸಮಿತಿಯನ್ನು ಕರೆದು ಇದರ ಆಗುಹೋಗುಗಳನ್ನು ಚರ್ಚಿಸಲಾಗುವುದು. ಏಕೆಂದರೆ ಪ್ರಾರಂಭದ ನಮ್ಮ ಸರ್ವೆ ಪ್ರಕಾರ ಒಂದು ಕೋಟಿ ಮರಕ್ಕೆ ಈ ರೋಗ ಬಂದಿತ್ತು. ಕಡೆಗೆ ನಾನು ಅನೇಕ ಪ್ರವಾಸ ಮಾಡಿದಾಗ ಧಾರವಾಡ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಬಂದಿತ್ತು. ನಾವು ಡೋರ್‌ಟು ಡೋರ್ ಸರ್ವೆ ಮಾಡಿಸಿದೆವು, ಆ ಪ್ರಕಾರ ನಾಲ್ಕು ಕೋಟಿಗೂ ಮಿಕ್ಕಿ ಮರಗಳಿಗೆ ಬಂದಿದೆ. ಆದ್ದರಿಂದ ಇದನ್ನು ವ್ಯಾಪಾಕವಾಗಿ ಮಾಡಬೇಕಾಗುತ್ತದೆ, ಅದಕ್ಕಾಗಿ 40 ಕೋಟಿ ರೂಪಾಯಿ ಬೇಕಾಗುತ್ತದೆಂಬ ಅಂದಾಜು ಮಾಡಿ ಅದಕ್ಕೆ ಬೇಕಾದ ಅನುಮತಿಯನ್ನೂ ನಮ್ಮ ಸಚಿವ ಸಂಪುಟ ನೀಡಿದೆ. ಆದ್ದರಿಂದ, ಅನುಷ್ಠಾನದಲ್ಲಿ ಆಗಿರುವ ಸ್ವಲ್ಪ ವ್ಯತ್ಯಾಸವನ್ನು ಸರಿಪಡಿಸಿಕೊಂಡು ನಮ್ಮ ಗುರಿ ಪ್ರಕಾರ ಸಾಧಿಸಲು ಉನ್ನತ ಮಟ್ಟದ ಸಮಿತಿ ಇದೆಯಲ್ಲಾ ಅದನ್ನು ಕರೆದು ಈ ವಿಚಾರಗಳನ್ನು ಚರ್ಚೆ ಮಾಡಿ ಇರತಕ್ಕ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡು ಚಿಕಿತ್ಸೆ ಕೊಡತಕ್ಕ ಕೆಲಸವನ್ನು ಮಾಡುವುದಕ್ಕೆ ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳೋಣ. ಅದಕ್ಕೆ ತಮ್ಮ ಸಹಕಾರ ಬೇಕು.

12.00

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಈ ಕಾರ್ಯಕ್ರಮಕ್ಕೆ 166 ಕೋಟಿ ರೂಪಾಯಿ ಹಣಬೇಕೆಂದು ಇವರೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇವರು ರಾಜ್ಯ ಸರ್ಕಾರದಿಂದ ಜುಜುಬಿ 7 ಕೋಟಿ ರೂಪಾಯಿ ರಿಲೀಸ್ ಮಾಡಿದ್ದಾರೆ. ಮೂರು ತಿಂಗಳಿಂದ ಸಮಿತಿ ಸಭೆ ಮಾಡಿಲ್ಲ, ಪಟ್ಟಣ ಸುಟ್ಟುಹೋದ ಮೇಲೆ ಬಾವಿ ತೋಡಿಸುತ್ತಾರಂತೆ. ಈ ಸರ್ಕಾರಕ್ಕೆ ತೆಂಗು ಬೆಳೆಗಾರರ ಮೇಲೆ ಪ್ರಿಜ್ಯುಡೀಸ್ ಇದೆ; ನೀರಾಗೋಸ್ಕರ ಅವರು ಹೋರಾಟ ಮಾಡಿದರೆಂದು ಇವರಿಗೆ ಪ್ರಿಜುಡೀಸ್ ಇದೆ. ಅದಕ್ಕೋಸ್ಕರ ಅವರು ಸಾಯಲಿ ಎನ್ನುವ ಮನೋಭಾವ ಇವರಲ್ಲಿದೆ. ಇದನ್ನು ಪ್ರತಿಭಟನೆ ಮಾಡಿ ನಾವು ತೆಂಗು ಬೆಳೆಗಾರರು ಸಭಾತ್ಯಾಗ ಮಾಡುತ್ತಿದ್ದೇವೆ. ಈ ಧೋರಣೆ ಸರಿಯಲ್ಲ. ಇದು ಖಂಡನೀಯವಾದುದು.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)